# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ 07/08/2021 ರಂದು ಬೆಳಗ್ಗೆ 11-00.ಗಂಟೆಗೆ ವಾರ್ಡ್-16 ಜಾಲಹಳ್ಳಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಕೆಗಳು

**ಹಾಜರಿದ್ದ ಅಧಿಕಾರಿಗಳು**

| ಕ್ರ ಸಂ | ಅಧ್ಯಕ್ಷರು/ ಸದಸ್ಯರ ಹೆಸರು | ಪದನಾಮ/ಇಲಾಖೆ |
|---|---|---|
| 1 | ಶ್ರೀ.ಹೆಚ್.ಎಸ್.ದಯಾನಂದ್ | ಸ.ಕಾ.ನಿ.ಅ. ವಾರ್ಡ್ ನೋಡಲ್ ಅಧಿಕಾರಿಗಳು |
| 2 | ಶ್ರೀ.ರಘುನಾಥ್.ಟಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 3 | ಶ್ರೀ.ರವಿಕುಮಾರ್.ಕೆ.ಆರ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ.ಆರ್.ಲೋಕೇಶ್ | ಕಂದಾಯ ಪರಿವೀಕ್ಷಕರು, ವಾರ್ಡ್-16 |
| 5 | ಶ್ರೀ.ವೇಣುಗೋಪಾಲ್ | ಕಂದಾಯ ವಸೂಲಿಗಾರರು, ವಾರ್ಡ್-16 |
| 6 | ಶ್ರೀ.ಮಾದೇಶ | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ |
| 7 | ಶ್ರೀ.ವೀರಣ್ಣ | ಬೆಸ್ಕಾಂ |
| 8 | ಶ್ರೀ.ನಾಗರಾಜು | ಪೌರಕಾರ್ಮಿಕರ ಮೇಲ್ವಿಚಾರಕರು |
| 9 | ಶ್ರೀಮತಿ.ಲಕ್ಷ್ಮೀದೇವಿ | ಲಿಂಕ್ ವರ್ಕರ್ |
| 10 | ಶ್ರೀಮತಿ.ನಸೀಮಾ ಬೇಗಂ | ಲಿಂಕ್ ವರ್ಕರ್ |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಿದ್ಧಾರ್ಥನಗರ, ಪೀಣ್ಯಾ ಪ್ಲಾಂಟೇಷನ್, ಜಾಲಹಳ್ಳಿಯಲ್ಲಿ ಅತಿ ಹೆಚ್ಚು ಮನೆ ಕೆಲಸ ಮಾಡುವ ನೌಕರರಿದ್ದು, ಎಲ್ಲರಿಗೂ ಅದ್ಯತೆ ಮೇರೆಗೆ ಲಸಿಕೆ ನೀಡಲು ಡಿಹೆಚ್‌ಸಿ ವೈದ್ಯರಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಮಳೆಗಾಲ ಆರಂಭವಾಗಿರುವುದರಿಂದ ಸಾಂಕ್ರಾಮಿಕ ರೋಗಗಳು ಡೆಂಗ್ಯೂ, ಮಲೇರಿಯಾ ಮುಂತಾದವು ಹರಡದಂತೆ ಮುಂಜಾಗ್ರತೆ ವಹಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.
- ಜಾಲಹಳ್ಳಿಯಲ್ಲಿ ಬರುವ ಕಾಳಿಂಗ ರಾವ್ ರಸ್ತೆ, ಹೆಚ್.ಎಂ.ಟಿ. ಕ್ಲಬ್ ಸರ್ಕಲ್ ರಸ್ತೆಉ ಅಕ್ಕ ಪಕ್ಕ ಹೊಸದಾಗಿ ವಿದ್ಯುತ್ ಲೈನ್ ಅಳವಡಿಸಿದ್ದು, ರಸ್ತೆ ಉದ್ದಕ್ಕೂ ಹೊಸದಾಗಿ ಬೀದಿ ದೀಪ ಅಳವಡಿಸಲು ಸಹಾಯಕ ಅಭಿಯಂತರರು (ವಿದ್ಯುತ್) ರಾಜರಾಜೇಶ್ವರಿನಗರ ವಲಯ ರವರಿಗೆ ಸೂಚಿಸಿದರು.
- ಜಾಲಹಳ್ಳಿ ಪೋಲೀಸ್ ಠಾಣೆ ಕಾಂಪೌಂಡ್ ಒಳಗಡೆ ಮರ ಬಿದ್ದಿದ್ದು, ತೆರವುಗೊಳಸಲು ಅರಣ್ಯ ವಿಭಾಗ (ರಾಜರಾಜೇಶ್ವರಿನಗರ) ರವರನ್ನು ಕೋರಿದರು.
- ಬ್ರಿಗೇಡ್ ಕೋರ್ಟ್‌ಯಾರ್ಡ್ ಅಪಾರ್ಟ್‌ಮೆಂಟ್ ಹೆಚ್.ಎಂ.ಟಿ. ಮುಖ್ಯರಸ್ತೆ ಯಿಂದ ಬಿಎಫ್‌ಡಬ್ಲ್ಯೂ ಸರ್ಕಲ್, ಮಧರ್ ತೆರೆಸಾ ಶಾಲೆ ಎಂಇಎಸ್ ರಿಂಗ್ ರಸ್ತೆ, ಪ್ರೆಸ್ಟೀಜ್ ವೆಲ್ಲಿಂಗಟನ್ ಪಾರ್ಕ್ ಅಪಾರ್ಟ್‌ಮೆಂಟ್, ಗಂಗಮ್ಮ ಸರ್ಕಲ್ ಕಡೆಗಳಲ್ಲಿ ರಸ್ತೆಗಳ ಗುಂಡಿಗಳು ಇದ್ದ ಅದನ್ನು ಸರಿಪಡಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರಿಗೆ ಸೂಚಿಸಿದರು.
- ಹೆಚ್.ಎಂ.ಟಿ. ಸೆಕ್ಟರ್-4 ರಲ್ಲಿ ಕಸ ಸಂಗ್ರಾಹಣೆ ಬಗ್ಗೆ ದೂರು ಬಂದಿದ್ದು, ಕಸ ಸಂಗ್ರಹಣೆಗೆ ವಾಹನ ಸೌಲಭ್ಯ ಒದಗಿಸಿ ಸಮಸ್ಯೆ ಬಗೆಹರಿಸುವಂತೆ ಸೂಚಿಸಿದರು.
- ರಿಲಯನ್ಸ್ ಮತ್ತು ನ್ಯಾಷನಲ್ ಟೆಕ್ನಿಕಲ್ ರಿಸರ್ಚ್ ಆರ್ಗನೈಸೇಷನ್ (ಎನ್.ಟಿ.ಆರ್.ಓ) ರಸ್ತೆ ಯಲ್ಲಿ ವಿದ್ಯುತ್ ದೀಪ ಅಳವಡಿಸಲು ಸೂಚಿಸಿದರು.
- ಪೌರ ಕಾರ್ಮಿಕರಿಗೆ ಬಾಕಿ ವೇತನ ಪಾವತಿಸುವುದು (ಕಾರಣಾಂತರಗಳಿಂದ ಈ ಹಿಂದಿನ ತಿಂಗಳ ವೇತನ ಪವತಿ ಆಗದೆ ಇರುವವರಿಗೆ) ಪಾವತಿಸಲು ಕ್ರಮವಹಿಸಲು ಸೂಚಿಸಿದರು.

- ಒಂದು ವರ್ಷದೊಳಗೆ ಕೈ ಬಿಟ್ಟಿರುವವರನ್ನು ಮುಂದಿನ ಕೆಲಸ ಕಾರ್ಯಗಳು ಕುಂಠಿತವಾಗದಂತೆ ಆದ್ಯತೆ ಮೇರೆಗೆ ರಸ್ತೆ ಅಳತೆಗನುಗುಣವಾಗಿ ನೇಮಕಾತಿಗಾಗಿ ಕಡತವನ್ನು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಲು ಸೂಚಿಸಿದರು.
- ಹಸಿ ಕಸ ಸಂಗ್ರಹಣೆ, ವಿಲೇವಾರಿಯನ್ನು ವಾರ್ಡ್ ವ್ಯಾಪ್ತಿಯಲ್ಲಿ 3 ರಿಂದ 4 ಟನ್ ಇದ್ದು ಅಂದಾಜು 6 ಟನ್ ವರೆಗೆ ಪ್ರಗತಿ ಸಾಧಿಸಲು ಸೂಚಿಸಿದರು.
- ಅಗತ್ಯತೆ ಅನುಗುಣವಾಗಿ ಆಟೋವನ್ನು ಮನೆ ಮನೆ ಸಂಗ್ರಹಕ್ಕೆ ಆದ್ಯತೆ ನೀಡಲು ಸೂಚಿಸಿದರು.

ಮೇಲ್ಕಂಡ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಂದಾಯ ಪರಿವೀಕ್ಷಕರು ಹಾಗೂ
ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ-16 ಜಾಲಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಶ್ರೀ.ಹೆಚ್.ಎಸ್.ದಯಾನಂದ್
ಸ.ಕಾ.ನಿ.ಅ ಹಾಗೂ ವಾರ್ಡ್‌ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-16 ಜಾಲಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ